# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 39 ಪ್ರಾ.ಸಾ. : 43**

| | | |
|---|---|---|
| ಸಾಕ್ಷಿಯ ಹೆಸರು | : | ಡಾ. ಅಂಬರೀಶ |
| ತಂದೆಯ ಹೆಸರು | : | ಪರಮೇಶ್ವರ |
| ವಯಸ್ಸು | : | 47 ವರ್ಷ |
| ಕೆಲಸ | : | ಪ್ರೊಫೆಸರ್, ಅರ್ಥೋಪೆಡಿಕ್ ವಿಭಾಗ<br>ವೈದೇಹಿ ಮೆಡಿಕಲ್ ಕಾಲೇಜು, ಬೆಂಗಳೂರು |
| ವಾಸ | : | ಬೆಂಗಳೂರು |

**ದಿನಾಂಕಃ 18-02-2026 ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. 2012 ರಿಂದ 2015ರ ವರೆಗೆ ನಾನು ಗೋವಾದ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.15-02-2014 ರಂದು ಈ ಪ್ರಕರಣದ ಗಾಯಾಳುವಾದ ಚಾಸಾ-22 ರವರನ್ನು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ನಾನು ಅವರನ್ನು ಪರೀಕ್ಷಿಸಿದಾಗ, ಅವರ ಎಡ ಹಣೆಯ ಮೇಲೆ 10 X 4 X 3 ಸೆಂ.ಮೀ. ಅಳತೆಯ ಒಂದು ಕತ್ತರಿಸಿದ ಗಾಯ, ಎಡ ಕಿವಿಯ ಮೇಲ್ಭಾಗದಲ್ಲಿ 7 X 4 X 3 ಸೆಂ.ಮೀ. ಅಳತೆಯ ಒಂದು ಕತ್ತರಿಸಿದ ಗಾಯವಾಗಿದ್ದು, ಎಡ ಮುಂಗೈಯು ಕತ್ತರಿಸಲಾಗಿತ್ತು. ತುಂಡಾಗಿದ್ದ ಎಡಗೈಗೆ ಶಸ್ತ್ರಚಿಕಿತ್ಸೆ ಮಾಡಿರುತ್ತೇನೆ ಹಾಗೂ ಉಳಿದ ಗಾಯಗಳಿಗೆ ನರರೋಗ ತಜ್ಞರು ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ಚಾಸಾ-22 ರವರ ಎಡಗೈ ತುಂಡಾಗಿ, ತೀವ್ರ ರಕ್ತ ಸ್ರಾವವಾಗಿದ್ದರಿಂದ, ನಾವು ಅವರಿಗೆ 2 ಬಾಟಲಿ ರಕ್ತವನ್ನು ಹಾಕಿರುತ್ತೇವೆ. ಆಕೆಯ ರಕ್ತದ ಗುಂಪನ್ನು ಪರೀಕ್ಷಿಸಿದಾಗ, ಅದು O+ ಆಗಿರುತ್ತದೆ. ಚಾಸಾ-22 ರವರನ್ನು ದಿ.15-02-2014 ರಿಂದ 22-02-2014 ರವರೆಗೆ ನಮ್ಮ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಂಡು ಚಿಕಿತ್ಸೆ ನೀಡಿ, ನಂತರ ಡಿಸ್ಚಾರ್ಜ್ ಮಾಡಿರುತ್ತೇವೆ. ಚಾಸಾ-22 ರವರನ್ನು ನಮ್ಮ ಆಸ್ಪತ್ರೆಯಿಂದ

ಡಿಸ್ಚಾರ್ಜ್ ಮಾಡುವ ಸಮಯದಲ್ಲಿ ಚಾಸಾ-22 ರವರಿಗೆ ಎರಡು ದಿನಗಳಿಗೊಮ್ಮೆ ಗಾಯಗಳಿಗೆ ಡ್ರೆಸ್ಸಿಂಗ್ ಮಾಡಿಸಿಕೊಳ್ಳುವಂತೆ ಹಾಗೂ ಒಂದು ವಾರದ ನಂತರ ಶಸ್ತ್ರಚಿಕಿತ್ಸೆ ಮಾಡುವಾಗ ಹಾಕಲಾದ ಹೊಲಿಗೆಯನ್ನು ತೆಗೆಸಿಕೊಳ್ಳುವಂತೆ ಸೂಚಿಸಿರುತ್ತೇನೆ. ಸಾಕ್ಷಿಯು ತಾನು ನೀಡಿದ ಡಿಸ್ಚಾರ್ಜ್ ಸಮ್ಮರಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-98 ಎಂದು, ಸಾಕ್ಷಿಯ ಸಹಿಯನ್ನು ನಿಪಿ-98(ಎ) ಎಂದು ಗುರುತಿಸಲಾಯಿತು. ಚಾಸಾ-22 ರವರಿಗೆ ಆದಂತಹ ಗಾಯಗಳು ಹರಿತವಾದ ಕತ್ತಿಯಿಂದ ಹೊಡೆದಾಗ ಆಗುವ ಸಾಧ್ಯತೆ ಇರುತ್ತದೆ.

**<u>ಪಾಟೀ ಸವಾಲುಃ ಆರೋಪಿ ಪರ ಎ.ಎ.ಎ. ರವರಿಂದಃ-</u>**

2. ಚಾಸಾ-22 ರವರನ್ನು ನಮ್ಮ ಆಸ್ಪತ್ರೆಯ ಜನರಲ್ ವಾರ್ಡ್ ನಲ್ಲಿ ದಾಖಲು ಮಾಡಿಕೊಂಡು ಚಿಕಿತ್ಸೆ ನೀಡಿರುತ್ತೇವೆ. ಜನರಲ್ ವಾರ್ಡಿನಲ್ಲಿ ದಾಖಲಾದ ರೋಗಿಗಳನ್ನು ಯಾರಾದರೂ ಭೇಟಿ ಮಾಡಬೇಕಾದಲ್ಲಿ, ನಿಮ್ಮ ಅನುಮತಿ ಪಡೆಯುತ್ತಾರಾ? ಎಂದು ಪ್ರಶ್ನೆ ಕೇಳಿದ್ದು, ಅದಕ್ಕೆ ಸಾಕ್ಷಿಯು ಕೆಲವೊಮ್ಮೆ ಪಡೆಯುತ್ತಾರೆ, ಕೆಲವೊಮ್ಮೆ ಪಡೆಯುವುದಿಲ್ಲ ಎಂದು ನುಡಿಯುತ್ತಾರೆ. ತನಿಖೆಗೆ ಸಂಬಂಧಿಸಿದಂತೆ, ಪೊಲೀಸರು ರೋಗಿಯಿಂದ ಏನಾದರೂ ಮಾಹಿತಿ ಪಡೆಯಬೇಕಾದಲ್ಲಿ, ಕಡ್ಡಾಯವಾಗಿ ಅನುಮತಿಯನ್ನು ಪಡೆಯುತ್ತಾರಾ? ಎಂದರೆ ಸಾಕ್ಷಿಯು, ಬಹುತೇಕ ಸಂದರ್ಭಗಳಲ್ಲಿ ಅನುಮತಿ ಪಡೆಯುತ್ತಾರೆ ಎಂದು ನುಡಿಯುತ್ತಾರೆ. ಚಿಕಿತ್ಸೆಯ ಕಾಲಕ್ಕೆ ಪೊಲೀಸರು ಏನಾದರೂ ರೋಗಿಗಳನ್ನು ಭೇಟಿ ಮಾಡಿದ್ದಲ್ಲಿ, ಅದನ್ನು ಕೇಸ್ ಶೀಟ್ ಅಥವಾ ಯಾವುದಾದರೂ ದಾಖಲೆಗಳಲ್ಲಿ ನಮೂದು ಮಾಡುತ್ತೀರಾ? ಎಂದರೆ, ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದಿ.15-02-2014 ರಿಂದ ದಿ.22-02-2014 ರ ಅವಧಿಯಲ್ಲಿ ಚಾಸಾ-22 ರವರನ್ನು ಪೊಲೀಸರು ಭೇಟಿ ಮಾಡಿದ್ದಾರಾ? ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ಚಾಸಾ-22 ರವರನ್ನು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಾಗ, ಅವರಿಗೆ ತೀವ್ರವಾದ ನೋವು ಇತ್ತು ಎಂದರೆ ಸರಿ. ಸಾಮಾನ್ಯವಾಗಿ ರೋಗಿಗೆ ತೀವ್ರ ನೋವು ಇದ್ದ ಸಂದರ್ಭದಲ್ಲಿ ಅರಿವು ಇರುವುದಿಲ್ಲ ಹಾಗೂ ದಿಗ್ಭ್ರಮೆಗೊಂಡಿರುತ್ತಾರೆ ಎಂದರೆ ಸರಿ. ಚಾಸಾ-22 ರವರಿಗೆ ತೀವ್ರ ಗಾಯವಾಗಿದ್ದ ಕಾರಣ, ಅವರಿಗೆ ಅರಿವು ಇರಲಿಲ್ಲ ಹಾಗೂ ಅವರು ದಿಗ್ಭ್ರಮೆಗೊಂಡಿದ್ದರು ಎಂದರೆ ಸಾಕ್ಷಿಯು ಚಾಸಾ-22 ರವರನ್ನು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಾಗ, ಅವರಿಗೆ

ಅರಿವು ಇತ್ತು ಎಂದು ನುಡಿಯುತ್ತಾರೆ. ತೀವ್ರ ನೋವು ಇರುವ ಸಂದರ್ಭದಲ್ಲಿ ನೋವು ನಿರೋಧಕ ಔಷಧಿಗಳನ್ನು ಕೊಡುತ್ತೇವೆ ಎಂದರೆ ಸರಿ. ಚಾಸಾ-22 ರವರಿಗೆ ತೀವ್ರ ಗಾಯವಾಗಿದ್ದರಿಂದ, ಅವರಿಗೆ ನೋವು ಕಡಿಮೆ ಮಾಡಲು, tramadol ನೀಡಿರುತ್ತೇವೆ ಎಂದರೆ ಸಾಕ್ಷಿಯು, ನನಗೆ ಈಗ ನೆನಪಿಲ್ಲ. ಆದರೆ, ಈ ರೀತಿಯ ಸಂದರ್ಭಗಳಲ್ಲಿ ಕೊಡುತ್ತೇವೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ Tramadol ನೀಡಿದಾಗ ಅವರಿಗೆ ಅರಿವು ಇರುವುದಿಲ್ಲ ಹಾಗೂ ಅವರು ದಿಗ್ಭ್ರಮೆಗೊಂಡಿರುತ್ತಾರೆ ಮತ್ತು ಅವರ ಮಿದುಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಿಲ್ಲ ಎಂದರೆ ಸಾಕ್ಷಿಯು, ಹೆಚ್ಚಿನ ಪ್ರಮಾಣದಲ್ಲಿ ನೀಡಿದಾಗ, ಆ ರೀತಿ ಆಗುತ್ತದೆ, ಆದರೆ ನಾವು ರೋಗಿಗಳಿಗೆ ಅವಶ್ಯವಿರುವ ಪ್ರಮಾಣದಲ್ಲಿ ಮಾತ್ರ ನೀಡುತ್ತೇವೆ ಎಂದು ನುಡಿಯುತ್ತಾರೆ. ಚಾಸಾ-22 ರವರಿಗೆ ಎಷ್ಟು ಪ್ರಮಾಣದಲ್ಲಿ ನೀಡಿದ್ದೆವು ಎಂದು ನನಗೆ ಈಗ ನೆನಪಿಲ್ಲ ಹಾಗೂ ಅದನ್ನು ಯಾರು ನೀಡಿದ್ದರು ಎಂದು ಹೇಳಲು ಬರುವುದಿಲ್ಲ. ಕೇಸ್ ಶೀಟನ್ನು ನೋಡಿ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು, ಚಾಸಾ-22 ರವರಿಗೆ ಸಂಬಂಧಿಸಿದ ಕೇಸ್ ಶೀಟ್ ಗೋವಾದಲ್ಲಿದ್ದು, ನಾನು ಈಗ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವುದಾಗಿ ನುಡಿಯುತ್ತಾರೆ.

4. 1 ಮತ್ತು 2 ನೇ ಗಾಯಗಳು ಸಾಮಾನ್ಯವಾಗಿ ಯಾವುದೇ ಮೊಂಡಾದ ವಸ್ತುವಿನಿಂದ ಹೊಡೆದಾಗ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. 3 ನೇ ಗಾಯವು ಹರಿತವಾದ ಆಯುಧದಿಂದ ಮಾತ್ರ ಆಗುತ್ತದೆ. 1 ರಿಂದ 3 ನೇ ಗಾಯಗಳು ಕತ್ತಿಯಿಂದ ಹೊಡೆದಾಗ ಆಗುವ ಸಾಧ್ಯತೆ ಇರುತ್ತದೆ.

**ಮರು ವಿಚಾರಣೆ – ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ಪಡೆಯಲಾಯಿತು. ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ